# ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾಯ್ದೆ – 2013ರ, ಕಲಂ 19(1) ಹಾಗೂ 19(2) ರಡಿ ಘೋಷಣೆ

ದಿನಾಂಕ 31.12.18

ಸಂ : ಕಂಇ 26 ಭೂಸ್ವಾಡ 2017

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಾರಾಹಿ ಎಡದಂಡೆ ಮುಖ್ಯ ನಾಲೆಯ ರಚನೆಗೆ ಉಡುಪಿ ಜಿಲ್ಲೆ, ಕುಂದಾಪುರ ತಾಲೂಕಿನ ತೆಕ್ಕಟ್ಟೆ ಗ್ರಾಮದ ಕೆಲವು ಜಮೀನುಗಳ ಭೂಸ್ವಾಧೀನತೆ ಅಗತ್ಯವಾಗಿದೆ ಎಂದು, ಈ ಯೋಜನೆಗೆ ಸಂಬಂಧಿಸಿದಂತೆ, ಭೂಸ್ವಾಧೀನತೆಪಡಿಸಿಕೊಳ್ಳುತ್ತಿರುವ ಜಮೀನುಗಳಿಗೆ ಕೇಂದ್ರ ಸರ್ಕಾರದ ಕಾಯ್ದೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013" ರ ಕಲಂ 6(2)ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರದ ಪರಿಸರ ಮತ್ತು ಅರಣ್ಯ ಇಲಾಖೆಯ ದಿನಾಂಕ 30-05-2005ರ ಅಧಿಸೂಚನೆಯನ್ವಯ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ SIA ಅನ್ವಹಿಸುವುದಿಲ್ಲವೆಂದು ಹಾಗೂ ಈ ಯೋಜನೆಗೆ ಸಂಬಂಧಿಸಿದಂತೆ EIA/SIA ವರದಿಯ ಮುಖ್ಯ ಅಂಶಗಳನ್ನು ಕಲಂ 19ರ ಪ್ರಕಾರ ಅಧಿಸೂಚನೆ ಹೊರಡಿಸುವ ಮುನ್ನ ಪ್ರಕಟಿಸುವುದು ಎಂಬುದಾಗಿ ಹೇಳಿ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾಯ್ದೆ – 2013ರ ಕಲಂ 11ರಡಿ ಕ್ರಮಾಂಕ ಎಲ್‌ಎಕ್ಯೂ ಸಿಆರ್ 61/2016(ಕ.ನಂ ಇ 21321) ದಿನಾಂಕ 28-07-2017 ರಲ್ಲಿ ಅಧಿಸೂಚಿಸಿ ಪ್ರಕಟಿಸಿದಂತೆ, ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗು ಪುನರ್‌ನಿರ್ಮಾಣ ಕಾಯ್ದೆ – 2013ರ ಕಲಂ 15 ರನ್ವಯ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ ಸದ್ರಿ ಪ್ರಕರಣದಲ್ಲಿ ಮುಂದುವರೆಯಲು ಸರ್ಕಾರದ ಪತ್ರ ಸಂಖ್ಯೆ ಕಂಇ 26 ಭೂಸ್ವಾಡ 2017 ದಿನಾಂಕ 08-02-2018 ರಡಿ ಸರ್ಕಾರದ ನಿರ್ದೇಶನ ನೀಡಲಾಗಿದೆ. ಹಾಗೂ ದಿನಾಂಕ 29-10-2018ರ ಅಧಿಸೂಚನೆಯಲ್ಲಿ ಈ ಪ್ರಕರಣದಲ್ಲಿ ಕಾಲಾವಕಾಶವನ್ನು ದಿನಾಂಕ 3-10-2018 ರಿಂದ 31-12-2018 ರವರೆಗೆ ವಿಸ್ತರಣೆಯನ್ನು ನೀಡಿರುತ್ತಾರೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾಯ್ದೆ – 2013 ರ ಕಲಂ 19(1)ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ, ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಜಮೀನುಗಳು ಅಗತ್ಯವಾಗಿವೆ ಎಂದು ಸದ್ರಿ ಅಧಿನಿಯಮ 19(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದ್ರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ(ಜಿ) ಖಂಡದ ಮೇರೆಗೆ ಉಪವಿಭಾಗಾಧಿಕಾರಿಗಳು ಕುಂದಾಪುರ ಉಪವಿಭಾಗ, ಕುಂದಾಪುರ ಇವರನ್ನು ಸದ್ರಿ ಜಮೀನುಗಳಲ್ಲಿ ಭೂಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ. ಹಾಗೂ ಸದ್ರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದ್ರಿ ಅಧಿನಿಯಮದ 20ನೇ ಪ್ರಕರಣ ಮೇರೆಗೆ ನಿರ್ದೇಶನ ನೀಡಲಾಗಿದೆ.

-71-

ರಾಜ್ಯ ಆಯುಕ್ತರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರು ಪತ್ರ ಸಂಖ್ಯೆ ಕಂಇ 22 ಎಸ್‌ಆರ್‌ಆರ್ 2018 ದಿನಾಂಕ 29-12-2018 ರ ಮೇರೆಗೆ ಈ ಯೋಜನೆಯ ಬಗ್ಗೆ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಕರಡು ಯಾದಿಯನ್ನು ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಹಾಗು ಪುನರ್‌ನಿರ್ಮಾಣ ಕಾಯ್ದೆ – 2013 ರ ಕಲಂ 17(2) ರಡಿಯಲ್ಲಿ ಅನುಮೋದಿಸಿದ್ದು, ಮತ್ತು ಅದನ್ನು ಕಲಂ 18 ರಡಿ ಪ್ರಕಟಿಸಲಾಗಿದ್ದು, ಈ ಪ್ರಸ್ತಾವನೆಯಲ್ಲಿ 01 ಕುಟುಂಬವು ಬಹುಪಾಲು ಜಮೀನನ್ನು ಕಳೆದುಕೊಳ್ಳುತ್ತಿದ್ದು ಹಾಗೂ ಇವರ ಜೀವನೋಪಾಯದ ಮುಖ್ಯ ಆಧಾರ (Primary source of livelihood) ಕ್ಕೆ ಧಕ್ಕೆ ಉಂಟಾಗುತ್ತಿದ್ದು ಉಳಿದ ಯಾವುದೇ ಕುಟುಂಬದ ಜೀವನೋಪಾಯದ ಮುಖ್ಯ ಆಧಾರಕ್ಕೆ ಧಕ್ಕೆ ಉಂಟಾಗುವುದಿಲ್ಲವಾಗಿ ತೀರ್ಮಾನಿಸಲಾಗಿದೆ. ಸದ್ರಿ ಯೋಜನೆಗೆ ಸಂಬಂಧಿಸಿದಂತೆ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಸಾರಾಂಶವನ್ನು ಈ ಮೂಲಕ ಕಲಂ 19(2) ರಡಿ ಈ ಮೂಲಕ ಘೋಷಿಸಿದೆ. ಕಾರಣ ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಹಾಗು ಪುನರ್‌ನಿರ್ಮಾಣ ಕಾಯ್ದೆ – 2013 ರ ಕಲಂ 31 ರಡಿ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಐತೀರ್ಪು ರಚಿಸಲು ತೀರ್ಮಾನಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದ್ರಿ ಅಧಿನಿಯಮದ 21ನೇ ಪ್ರಕರಣದ ಉಪ-ಪ್ರಕರಣ (1)ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನು ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮು ಸಲ್ಲಿಸಲು ತಿಳುವಳಿಕೆಯ ನೋಟೀಸು ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದ್ರಿ ಅಧಿಸೂಚನೆಯಂತೆ, ಭೂಸ್ವಾಧೀನತೆಗೊಳಪಡಿಸುವ ಕುಂದಾಪುರ ತಾಲೂಕಿನ ತೆಕ್ಕಟ್ಟೆ ಗ್ರಾಮದ ಜಮೀನುಗಳ ವಿವರವನ್ನು ಸೂಚಿಸುವ ಒಂದು ನಕ್ಷೆಯನ್ನು ಮತ್ತು ಅಧಿಸೂಚನೆಯಲ್ಲಿ ಸಂಬಂಧಿಸಿದ ಎಲ್ಲಾ ಹಿತಾಸಕ್ತಿದಾರರ ಹಾಗೂ ಸಾರ್ವಜನಿಕ ಹಿತಾಸಕ್ತಿಗಾಗಿ ಅವಗಾಹನೆಗಾಗಿ ಭೂಸ್ವಾಧೀನಾಧಿಕಾರಿ ಮತ್ತು ಸಹಾಯಕ ಕಮೀಷನರ್ ಕುಂದಾಪುರ ಇವರ ಕಛೇರಿಯಲ್ಲಿ ಇಡಲಾಗಿದೆ.

**ಜಿಲ್ಲೆ – ಉಡುಪಿ** **ತಾಲೂಕು : ಕುಂದಾಪುರ** **ಹೋಬಳಿ : ಕುಂದಾಪುರ** **ಗ್ರಾಮ : ತೆಕ್ಕಟ್ಟೆ**

| ಕ್ರ.ಸಂ | ಖಾತೆದಾರರ ಹೆಸರು | ಸ.ನಂಬ್ರ | ಜಮೀನಿನ ತರಹೆ | ಚಕ್ಕುಬಂದಿ | | | | ಭೂಸ್ವಾಧೀನ ವಿವರ | | ಕಟ್ಟಡ/ ಬಾವಿ/ ಇತರೆ | ಗಿಡ/ಮರ |
|---|---|---|---|---|---|---|---|---|---|---|---|
| | | | | ಉತ್ತರ (ಸ.ನಂ) | ದಕ್ಷಿಣ (ಸ.ನಂ) | ಪೂರ್ವ (ಸ.ನಂ) | ಪಶ್ಚಿಮ (ಸ.ನಂ) | ವಿಸ್ತೀರ್ಣ (ಎ-ಸೆ) | ಮೌಲ್ಯ | | |
| 1 | ದೇವಕಿ ಶೆಡ್ತಿ ಬಿನ್ ಸರೋಜಿನಿ ಶೆಡ್ತಿ | 316/2 | ತರಿ | 333 | 315 | 316/3ಎ3 | 316/2ಎ | 0.12 | 0.12 | – | ಅಕೇಶ – 15, ಕಿರಾಳ ಭೋಗಿ – 01, |
| 2 | ಎಂ. ನಾಗರಾಜ ಭಟ್ಟ ಬಿನ್ ರಾಮಚಂದ್ರ ಭಟ್, ಗಣಪತಿ ಭಟ್ ಬಿನ್ ಎಂ. ನಾಗರಾಜ ಭಟ್, ರಘುಪತಿ ಭಟ್ಟ ಬಿನ್ ನಾಗರಾಜ ಭಟ್, | 316/3ಎ3 | ತರಿ | 333 | 315 | 316/3ಎ3 | 316/2ಎ | 0.11 | 0.11 | – | ತೆಂಗು – 2, ಸಾಗುವಾನಿ-2, ಸುರಗಿ ಮರ-2 |

| | | | | | | | | | | | |
|---|---|---|---|---|---|---|---|---|---|---|---|
| 16 | ಆನಂದ ಸಿ. ಕುಂದರ್ ಬಿನ್ ಚಿಕ್ಕಯ್ಯ ಘರಕಾಲ<br>ಸತೀಶ್ ಬಲ್ಲಾಳ್,<br>ಚಂದ್ರಶೇಖರ ಬಲ್ಲಾಳ್,<br>ಜ್ಯೋತಿ ಬಿ ಬಲ್ಲಾಳ್,<br>ಬಾಲಕೃಷ್ಣ ಶೆರ್ವೆಗಾರ್ ಬಿನ್ ದುಗ್ಗಪ್ಪ ಶೆರ್ವೆಗಾರ್ | 335/2ಎ | ಖುಷ್ಕಿ | 335/2ಎ | 335/4 | 335/3 | 335/2ಬಿ | 0.70 | 0.70 | ಹಂಚಿನ ಮನೆ 2 ಸಿಮೆಂಟ ೧, ತಂತಿ ಬೇಲಿ 1.03 ಮೀ | ಅಕೇಶಿಯ ಗಿಡ ಸಾಗುವಾನಿ ಸಸಿಗಳು, ತೆಂಗು – 15 |
| 17 | ಆನಂದ ಸಿ. ಕುಂದರ್ ಬಿನ್ ಚಿಕ್ಕಯ್ಯ ಮರಕಾಲ<br>ಸತೀಶ್ ಬಲ್ಲಾಳ್,<br>ಚಂದ್ರಶೇಖರ ಬಲ್ಲಾಳ್,<br>ಜ್ಯೋತಿ ಬಿ ಬಲ್ಲಾಳ್,<br>ಬಾಲಕೃಷ್ಣ ಶೆರ್ವೆಗಾರ್ ಬಿನ್ ದುಗ್ಗಪ್ಪ ಶೆರ್ವೆಗಾರ್ | 335/2ಬಿ | ಖುಷ್ಕಿ | 335/2ಎ | 335/7 | 335/2ಬಿ | 336 | 0.13 | 0.13 | – | ಸಾಗುವಾನಿ- 15<br>ಅಕೇಶಿಯ –30 |
| 18 | ವಿನಯ ಎನ್ ಶೆಟ್ಟಿ<br>ಕೋಂ ನರೇಶ್ ಕುಮಾರ್ ಶೆಟ್ಟಿ | 335/3 | ಖುಷ್ಕಿ | 335/1ಡಿ | 335/3 | 335/3 | 335/2ಎ | 0.34 | 0.34 | – | ಗೇರು – 10 ಕಾಟು ಜಾತಿ ಮರಗಳು |
| 19 | ರಕ್ಷಿತ್ ಎ ಕುಂದರ್<br>ಬಿನ್ ಆನಂದ ಸಿ ಕುಂದರ್ | 335/7 | ಖುಷ್ಕಿ | 335/2ಬಿ | 335/4 | 335/4 | 335/7 | 0.70 | 0.56 | – | ಅಕೇಶಿಯ, ಕಾಟು ಜಾತಿ ಮರಗಳು |
| 20 | ಸರಸ್ವತಿ ಶೆಡ್ತಿ ಬಿನ್ ಮೀನಾಕ್ಷಿ ಶೆಡ್ತಿ | 346/1 | ಖುಷ್ಕಿ | 346/1 | 335 | 346/1 | 346/1 | 0.26 | 0.20 | – | ಅಕೇಶಿಯ –25 ಕಾಟು ಜಾತಿ ಮರಗಳು |
| 21 | ಮಯ್ಯದ್ದಿ ಸಾಹೇಬ ಬಿನ್ ಯೂಸುಫ್ ಸಾಹೇಬ್ | 346/1 | ಖುಷ್ಕಿ | 346/1 | 335 | 346/1 | 346/1 | 0.05 | 0.04 | – | ಅಕೇಶ –12 |
| 22 | ಗೌರಮ್ಮ ಶೆಡ್ತಿ, ವಿಠಲ ಶೆಟ್ಟಿ, | 346/1 | ಖುಷ್ಕಿ | 346/1 | 346/1 | 346/1 | 346/1 | 0.60 | 0.48 | – | ಗೇರು – 36, ಅಕೇಶ –12, ಕಾಟು ಜಾತಿ ಮರಗಳು |
| 23 | ಪ್ರಭಾಕರ ಶೆಟ್ಟಿ, ಅಶೋಕ, ಬಾಲಕೃಷ್ಣ, ದಯಾನಂದ,<br>ಸರಸ್ವತಿ ಶೆಡ್ತಿ ಬಿನ್ ಮೀನಾಕ್ಷಿ ಶೆಡ್ತಿ | 346/1 | ಖುಷ್ಕಿ | ಕುಂಭಾಶಿ ಗಡಿ | 346/1 | 346/1 | 346/1 | 2.00 | 1.60 | – | ಅಕೇಶ – 20, ಗೇರು ಮರ, ಕಾಟು ಜಾತಿ ಮರಗಳು |
| 24 | ಶೀನಪ್ಪ ಶೆಟ್ಟಿ ಬಿನ್ ದಿ ಚೆನ್ನಮ್ಮ ಶೆಡ್ತಿ<br>ವ್ಯವಸ್ಥಾಪಕರು ದ.ಕ.ಜಿ.ಕೇ.ಸಹಕಾರಿ ಬ್ಯಾಂಕ್ ತೆಕ್ಕಟ್ಟೆ | 348/4 | ತರಿ | 348/4 | ಕುಂಭಾಶಿ ಗ್ರಾಮದ ಗಡಿ | 348/4 | 348/6 | 0.25 | 0.65 | – | – |

| | | | | | | | | | | | |
|---|---|---|---|---|---|---|---|---|---|---|---|
| 25 | ಮೂಕಾಂಬಿಕ ಶೆಡ್ತಿ ಬಿನ್ ಚಿಕ್ಕಮ್ಮ ಶೆಡ್ತಿ | 348/4 | ತರಿ | 348/9ಎ1 | 348/4 | 348/9ಎ1 | 348/9ಎ | 0.30 | 0.78 | – | ಮಾವು – 1, ಗೇರು–2, ಸಾಗುವಾನಿ–1 ಹನಿಮರ–2 |
| 26 | ನರ್ಸಿ, ಚಂದು, ಭಾಸ್ಕರ, ಕೂಸ, ನರಸಿಂಹ, ಭಾಗಿರತಿ, ಗುಲಾಬಿ, ಶಂಭು, ವಿಜಯ, ರಾಜೀವಿ, ಮೀನಾ, ದಿ. ಸರ್ವೇಶ್ರೀ ಯಾನೆ ಸೋಮಕ್ಕರವರ ವಾರೀಸುದಾರರು. | 348/22 | ತರಿ | ಕುಂಭಾಶಿ ಗ್ರಾಮದ ಗಡಿ | 348/9ಎ1 | 348/9ಎ2 | 348/9ಎ 2 | 0.05 | 0.26 | – | – |
| 27 | ಬಿಲ್ಲ ಮಂಜ ಬಿನ್ ಬಿಲ್ಲ ಕುಷ್ಟ | 348/9ಎ1 | ತರಿ | 348/9ಎ1 | 348/4 | 348/9ಎ1 | 348/9ಎ 1 | 0.45 | 2.36 | – | – |
| 28 | ಬಿಲ್ಲ ಗಣಪ ಬಿನ್ ಬಿಲ್ಲ ಕುಷ್ಟ | 348/9ಎ2 | ತರಿ | ಕುಂಭಾಶಿ ಗ್ರಾಮದ ಗಡಿ | 348/9ಎ1 | 948/9ಎ2 | 348/9ಎ 2 | 0.25 | 1.32 | – | – |
| 29 | ಬಿಲ್ಲ ಗಣಪ ಬಿನ್ ಬಿಲ್ಲ ಕುಷ್ಟ | 348/9ಎ3 | ತರಿ | 348/9ಎ1 | 948/9ಎ1 | 348/9ಎ1 | 348/9ಎ 3 | 0.11 | 0.58 | – | – |

-35-

(ಟಿ. ಭೂಬಾಲನ್ ಭಾ.ಆ.ಸೇ)
ಭೂಸ್ವಾಧೀನಾಧಿಕಾರಿ ಹಾಗೂ
ಸಹಾಯಕ ಕಮೀಷನರ್, ಕುಂದಾಪುರ

ಪಿ.ಆರ್. 28 ಬಿ.ಪ್ರ (10)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸ್ವಾಧೀನ 1.3)